ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 06.06.2025

**ಸುತ್ತೋಲೆ**

ವಿಷಯ: ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಫಲಿತಾಂಶದಲ್ಲಿ ಆಂತರಿಕ ಅಂಕಗಳು ಪ್ರಕಟವಾಗದಿದ್ದಲ್ಲಿ / ಫಲಿತಾಂಶ ತಡೆಹಿಡಿಯಲ್ಪಟ್ಟಿದ್ದಲ್ಲಿ ಮಂಡಳಿಯಲ್ಲಿ Update ಮಾಡಲು ಸಂಸ್ಥೆಗಳು ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.04.2015

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ವಿದ್ಯಾರ್ಥಿಗಳ ಪ್ರಕಟಿತ ಫಲಿತಾಂಶವನ್ನು ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರುಗಳು ಮತ್ತು ವಿಭಾಗಾಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ, ಫಲಿತಾಂಶಗಳಲ್ಲಿ ಸಂಸ್ಥೆಗಳ ಲೋಪದಿಂದ **ಯಾವುದೇ ವಿದ್ಯಾರ್ಥಿ/ಗಳ ಆಂತರಿಕ ಅಂಕಗಳು ಫಲಿತಾಂಶದಲ್ಲಿ ಪ್ರತಿಬಿಂಬಿತವಾಗಿಲ್ಲದಿದ್ದ ಪಕ್ಷದಲ್ಲಿ/ ಫಲಿತಾಂಶ Withheld ಆಗಿದ್ದಲ್ಲಿ** ಸದರಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಂಡಳಿಯಲ್ಲಿ ಅಗತ್ಯ ಕ್ರಮವಹಿಸುವ ಸಲುವಾಗಿ ಸಂಸ್ಥೆಯ ಪ್ರಾಚಾರ್ಯರಿಂದ ವಿವರವಾದ ಲಿಖಿತ ಪತ್ರ ಮತ್ತು ಈ ಕೆಳಕಂಡ ಮೂಲ & ದೃಢೀಕೃತ ದಾಖಲೆಗಳೊಂದಿಗೆ ದಿನಾಂಕ:09.06.2025 ರಿಂದ 19.06.2025 ರೊಳಗೆ ತಾಂತ್ರಿಕ ಪರೀಕ್ಷಾ ಮಂಡಳಿಯ ಕಛೇರಿಯನ್ನು ಸಂಪರ್ಕಿಸಲು ಹಾಗೂ ನಂತರದ ದಿನಗಳಲ್ಲಿ ಬಂದಂತಹ ಮನವಿಗಳನ್ನು ಪುರಸ್ಕರಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

1. ಸಂಸ್ಥೆಯ ಪ್ರಾಂಶುಪಾಲರಿಂದ ಪ್ರತಿ ವಿದ್ಯಾರ್ಥಿಯ ಫಲಿತಾಂಶದ ವಿವರಗಳನ್ನೊಳಗೊಂಡ ಲಿಖಿತ ಪತ್ರವನ್ನು ಪ್ರತಿ ವಿದ್ಯಾರ್ಥಿಗೆ ಒಂದು ಪತ್ರದಂತೆ ಸಲ್ಲಿಸುವುದು.
2. ಸಂಸ್ಥೆಯ ಪ್ರಾಂಶುಪಾಲರಿಂದ ದೃಢೀಕೃತಗೊಂಡ ಸಂಬಂಧಪಟ್ಟ ವಿದ್ಯಾರ್ಥಿಯ ATS ಶೀಟ್ ನ ಪ್ರತಿ.
3. ಪ್ರಾಂಶುಪಾಲರಿಂದ ದೃಢೀಕೃತಗೊಂಡ, ಸಂಬಂಧಪಟ್ಟ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿಯು ಶುಲ್ಕ ಪಾವತಿಸಿರುವ ಚಲನ್ ಪ್ರತಿ
4. ಪ್ರಾಂಶುಪಾಲರಿಂದ ದೃಢೀಕರಿಸಿದ ಸಂಬಂಧಪಟ್ಟ ವಿದ್ಯಾರ್ಥಿಯ ಪ್ರವೇಶ ಪತ್ರದ ಪ್ರತಿ.
5. **ಸಂಸ್ಥೆಯ ಮೂಲ ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಚೆಕ್‌ಲಿಸ್ಟ್:** ರಿಜಿಸ್ಟರ್‌ನಲ್ಲಿನ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರಬೇಕು ಹಾಗೂ ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ಪ್ರಿನ್ಸಿಪಾಲರು & ಆಂತರಿಕ ಅಂಕಗಳ ಪರಿವೀಕ್ಷಕರು ಈ ಕಛೇರಿ ಜ್ಞಾಪನದಲ್ಲಿ ಸೂಚಿಸಿರುವಂತೆ ದೃಢೀಕರಿಸಿರಬೇಕು.
6. ಫಲಿತಾಂಶದಲ್ಲಿ ಆಂತರಿಕ ಅಂಕಗಳು ಪ್ರತಿಬಿಂಬಿತವಾಗಿಲ್ಲದ ವಿದ್ಯಾರ್ಥಿಯ ಸೆಮಿಸ್ಟರ್‌ನ ಆಂತರಿಕ ಅಂಕಗಳ ಮೂಲ ವಹಿಯ ದೃಢೀಕೃತ ಫೋಟೋ ಪ್ರತಿ (ಪೂರ್ಣ ಸೆಮಿಸ್ಟರ್‌ನ ದೃಢೀಕೃತ ಪ್ರತಿ) ಮತ್ತು ಚೆಕ್‌ಲಿಸ್ಟ್‌ನ ದೃಢೀಕೃತ ಪ್ರತಿಗಳನ್ನು ಪತ್ರದೊಂದಿಗೆ ಲಗತ್ತಿಸುವುದು.

   **ವಿಶೇಷ ಸೂಚನೆ: ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳ ತಿದ್ದುಪಡಿ ಮಾಡಬೇಕಾದ ಸಂದರ್ಭದಲ್ಲಿ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ನಮೂದಾಗಿರುವ ಅಂಕಗಳೇ ಅಂತಿಮವಾಗಿದ್ದು, ಆಂತರಿಕ ಅಂಕಗಳ ಪರಿವೀಕ್ಷಕರು ಅಂತಹ ವಿದ್ಯಾರ್ಥಿಗಳ ವಿವರಗಳನ್ನು ರಿಜಿಸ್ಟರ್ ನಂಬರ್ ಸಹಿತ ಚೆಕ್ ಲಿಸ್ಟ್ ನಮೂನೆಯಲ್ಲಿನ ಷರಾ ಕಾಲಂನಲ್ಲಿ ನಮೂದಿಸಿ ದೃಢೀಕರಿಸಬೇಕು.**

ಆಂತರಿಕ ಅಂಕಗಳನ್ನು/ಅಭ್ಯರ್ಥಿಗಳ ಪಟ್ಟಿಯನ್ನು ಸರಿಯಾಗಿ Upload ಮಾಡದೆ ಲೋಪವೆಸಗಿದ್ದಲ್ಲಿ ಉಲ್ಲೇಖದ ಸರ್ಕಾರಿ ಆದೇಶದ ಪ್ರಕಾರ K2 ಮುಖಾಂತರ ನಿಗದಿತ ದಂಡ ಪಾವತಿಸಿ ಚಲನ್ ಪ್ರತಿಯನ್ನು ಮಂಡಳಿಗೆ ಸಲ್ಲಿಸುವುದು.

ಕಾರ್ಯದರ್ಶಿ

ಇವರಿಗೆ,

ರಾಜ್ಯದಲ್ಲಿನ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ

ಪ್ರತಿ:

1. ಉಪನಿರ್ದೇಶಕರು, ತಾಂ.ಪಂ.ಮಂ. – ಮಾಹಿತಿಗಾಗಿ
2. ಸಹಾಯಕ ನಿರ್ದೇಶಕರು, ತಾಂ.ಪಂ.ಮಂ. – ಮಾಹಿತಿಗಾಗಿ
3. ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ (ಸ) ಪಾಲಿಟೆಕ್ನಿಕ್, ಮಂಗಳೂರು– ಮಾಹಿತಿಗಾಗಿ
4. ಹಿರಿಯ ತಾಂತ್ರಿಕ ಸಹಾಯಕರುಗಳು/ ತಾಂತ್ರಿಕ ಸಹಾಯಕರುಗಳು ತಾಂ.ಪಂ.ಮಂ.–ಮಾಹಿತಿ & ಅಗತ್ಯಕ್ರಮಕ್ಕಾಗಿ
5. ರಿಜಿಸ್ಟ್ರಾರ್ (ಪರೀಕ್ಷೆ) ತಾಂ.ಪಂ.ಮಂ. – ಮಾಹಿತಿಗಾಗಿ
6. ಆರ್.ಡಿ.ಎಂ. ವಿಭಾಗದ ಕಛೇರಿ ಅಧೀಕ್ಷಕರುಗಳು ಮತ್ತು ಕಾರ್ಯ ನಿರ್ವಾಹಕರುಗಳಿಗೆ–ಮಾಹಿತಿ& ಅಗತ್ಯಕ್ರಮಕ್ಕಾಗಿ
7. ಇ–ಆಡಳಿತ – ವೆಬ್ ಸೈಟ್‌ನಲ್ಲಿ ಪ್ರಕಟಿಸಲು 8. ಗಣಕ ಕೇಂದ್ರ– ವೆಬ್‌ಪೋರ್ಟಲ್ ನಲ್ಲಿ ಪ್ರಕಟಿಸಲು